# ಫ್ಲಿಪ್ ಕಾರ್ಟ್ ಮತ್ತು ಮೈಂತ್ರಾದಲ್ಲಿ ತಾವಿಯ ಮೊದಲ ಪರ್ಸನಲ್ ಕೇರ್ ಶ್ರೇಣಿಯ ಉತ್ಪನ್ನಗಳ ಬಿಡುಗಡೆ

- **ಸೌಂದರ್ಯ ಮತ್ತು ಆರೋಗ್ಯಕ್ಕೆ ನೈಸರ್ಗಿಕ ಅಂಶಗಳ ಶಕ್ತಿಯನ್ನು ನೀಡುವ ಹೊಸ ಉತ್ಪನ್ನಗಳು**
- **ನೈಸರ್ಗಿಕ, ಸುರಕ್ಷಿತ ಮತ್ತು ನೈಜವಾದ ಹೇರ್ ಕ್ಲೀನ್ಸರ್ಸ್, ಹೇರ್ ಕಂಡೀಶನರ್ಸ್ ಮತ್ತು ಫೇಸ್ ವಾಶಸ್**

ಬೆಂಗಳೂರು, ಫೆಬ್ರವರಿ 25, 2021: ಭಾರತೀಯ ಸಾಂಪ್ರದಾಯಿಕ ಜವಳಿ ಕರಕುಶಲ ವಸ್ತುಗಳನ್ನು ಆಧುನಿಕ ಫ್ಯಾಷನ್ ಸಂವೇದನೆಗಳೊಂದಿಗೆ ಬೆಸೆಯುವ ಮೈಂತ್ರಾದ ಮಲ್ಟಿ-ಕಲ್ಚರಲ್ ಲೈಫ್ ಸ್ಟೈಲ್ ಬ್ರ್ಯಾಂಡ್ ಆಗಿರುವ ತಾವಿ ಇದೀಗ ವೈಯಕ್ತಿಕ ಆರೈಕೆ ಉತ್ಪನ್ನಗಳ ವಿಭಾಗವನ್ನು ಪ್ರವೇಶಿಸಿದೆ. ಮೈಂತ್ರಾ ಮತ್ತು ಫ್ಲಿಪ್ ಕಾರ್ಟ್ ಎರಡೂ ಸೇರಿ ತಾವಿ ಬ್ರ್ಯಾಂಡ್ ಅಡಿ ಹೇರ್ ಕ್ಲೀನ್ಸರ್ಸ್, ಹೇರ್ ಕಂಡೀಶನರ್ಸ್ ಮತ್ತು ಫೇಸ್ ವಾಶ್ ಗಳನ್ನು ಅಭಿವೃದ್ಧಿಪಡಿಸಿವೆ. ಇದು ಸಾಂಪ್ರದಾಯಿಕವಾದ ಕರಕುಶಲತೆಯನ್ನು ಆಧುನಿಕ ಗ್ರಾಹಕರಿಗೆ ಹೆಚ್ಚು ಪ್ರಸ್ತುತಪಡಿಸುವಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸಿದೆ ಮತ್ತು ಅವುಗಳ ಪುನರುಜ್ಜೀವನದ ಮೇಲೆ ಕೇಂದ್ರೀಕರಿಸಿದೆ.

ಈ ಪ್ರಯತ್ನವನ್ನು ಮತ್ತಷ್ಟು ವಿಸ್ತರಣೆ ಮಾಡುವ ನಿಟ್ಟಿನಲ್ಲಿ ಹೊಸದಾಗಿ ಪ್ರಾರಂಭಿಸಲಾಗಿರುವ ವೈಯಕ್ತಿಕ ಆರೈಕೆ ಶ್ರೇಣಿಯು ಸ್ವಾಭಾವಿಕವಾಗಿದೆ. ಭಾರತದ ಕೆಲವು ಸಾಂಪ್ರದಾಯಿಕ ಸೂತ್ರೀಕರಣಗಳಿಗೆ ಸಮಕಾಲೀನವಾದ ತಿರುವನ್ನು ಇದು ನೀಡುತ್ತದೆ. ಈ ಉತ್ಪನ್ನಗಳನ್ನು ಖಾದಿ ಕೈಗಾರಿಕೆ ಮತ್ತು ಸಣ್ಣ ಪ್ರಮಾಣದ ಉದ್ಯಮಗಳ ಸಹಯೋಗದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಈ ಮೂಲಕ ಭಾರತದ ಸಾವಿರಾರು ಗ್ರಾಮೀಣ ಮಹಿಳೆಯರು ಮತ್ತು ಸ್ಥಳೀಯ ಮಟ್ಟದ ಸಮುದಾಯಗಳೊಂದಿಗೆ ಕೆಲಸ ಮಾಡಲಿದೆ.

ಕಳೆದ ಕೆಲವು ವರ್ಷಗಳಿಂದ ಗ್ರಾಹಕರು ನೈಸರ್ಗಿಕ ಅಥವಾ ಸಾವಯವ ಸ್ಕಿನ್ ಕೇರ್ ಉತ್ಪನ್ನಗಳಿಗೆ ಆದ್ಯತೆ ನೀಡುತ್ತಿದ್ದಾರೆ. ಅಸೋಚಾಮ್ ವರದಿ ಪ್ರಕಾರ, ಭಾರತದಲ್ಲಿನ ಪರ್ಸನಲ್ ಸ್ಕಿನ್ ಕೇರ್ ಮಾರುಕಟ್ಟೆಯ ವಹಿವಾಟು 2035 ರ ವೇಳೆಗೆ 20 ಬಿಲಿಯನ್ ಡಾಲರ್ ಗೆ ತಲುಪಲಿದೆ.

ನೈಸರ್ಗಿಕವಾದ, ರಾಸಾಯನಿಕ ಮುಕ್ತವಾದ ಉತ್ಪನ್ನದ ಅನುಭವವನ್ನು ನೀಡುವ ಸುಸ್ಥಿರ `ಮೇಡ್ -ಇನ್-ಇಂಡಿಯಾ' ಬ್ರ್ಯಾಂಡ್ ಗಳತ್ತ ಗ್ರಾಹಕರು ಗಮನಹರಿಸಿದ್ದಾರೆ. ಈ ಬೆಳೆಯುತ್ತಿರುವ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ತಾವಿ ಪರ್ಸನಲ್ ಕೇರ್ ಶ್ರೇಣಿಯು ನೈಸರ್ಗಿಕ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಿದೆ. ಸಸ್ಯ ಆಧಾರಿತ ಕಚ್ಚಾ ಪದಾರ್ಥಗಳಿಂದ ಈ ಉತ್ಪನ್ನಗಳನ್ನು

ಉತ್ಪಾದಿಸಲಾಗುತ್ತಿದ್ದು, ಇವುಗಳು ನೈಸರ್ಗಿಕ ಅನುಭವವನ್ನು ನೀಡಲಿವೆ. ಬೃಂಗರಾಜ್, ಪಪಾಯ, ಅಲೋವೆರಾ. ರೀತಾ, ಶಿಕಾಕಾಯಿ, ಆಮ್ಲ, ತೆಂಗಿನೆಣ್ಣೆ ಸೇರಿದಂತೆ ಶತಶತಮಾನಗಳಿಂದ ಭಾರತದಲ್ಲಿ ಬಳಸಲಾಗುತ್ತಿರುವ ಇನ್ನಿತರೆ ಸಾಂಪ್ರದಾಯಿಕ ಉತ್ಪನ್ನಗಳನ್ನು ಈ ಪರ್ಸನಲ್ ಕೇರ್ ಶ್ರೇಣಿಯ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ನಿಜವಾಗಿಯೂ ನೈಸರ್ಗಿಕ, ನೈಜ ಮತ್ತು ಸುರಕ್ಷಿತ ಪ್ರಮಾಣದಲ್ಲಿ ಈ ತಾವಿ ಪರ್ಸನಲ್ ಕೇರ್ ಉತ್ಪನ್ನಗಳಿವೆ. ಉದಾಹರಣೆಗೆ ನ್ಯಾಟ್ ರಿಯಲ್. ಈ ಬ್ರ್ಯಾಂಡ್ ಗ್ರಾಹಕರಿಗೆ ಅತ್ಯುತ್ಕೃಷ್ಟವಾದ ಗುಣಮಟ್ಟ ಮತ್ತು ವಿಶ್ವಾಸಾರ್ಹವಾದ ಉತ್ಪನ್ನಗಳನ್ನು ನೀಡುತ್ತದೆ. ದೇಶೀಯ ಇ-ಕಾಮರ್ಸ್ ಕಂಪನಿಗಳಾದ ಫ್ಲಿಪ್ ಕಾರ್ಟ್ ಮತ್ತು ಮೈಂತ್ರಾ ಅಧಿಕೃತವಾಗಿ ಈ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಿರುವುದು ವಿಶೇಷವಾಗಿದೆ.

ತಾವಿಯ ಹೊಸ ಶ್ರೇಣಿಯ ಬಗ್ಗೆ ಮಾತನಾಡಿದ ಫ್ಲಿಪ್ ಕಾರ್ಟ್ ನ ಬಿಜಿಎಚ್‌ಎಂ, ಫರ್ನಿಚರ್ ಅಂಡ್ ಗ್ರಾಸರಿಯ ಸೀನಿಯರ್ ವೈಸ್ ಪ್ರೆಸಿಡೆಂಡ್ ಮನೀಶ್ ಕುಮಾರ್ ಅವರು, ``ಆರೋಗ್ಯಕರವಾದ ಮತ್ತು ನ್ಯಾಚುರಲ್ ಪರ್ಸನಲ್ ಕೇರ್ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗತೊಡಗಿದೆ. ಫ್ಲಿಪ್ ಕಾರ್ಟ್ ಪ್ಲಾಟ್ ಫಾರ್ಮ್ ನಲ್ಲಿ ಗ್ರಾಹಕರ ಖರೀದಿ ನಡವಳಿಕೆಯ ಮೂಲಕ ಇದಕ್ಕೆ ನಾವು ಸಾಕ್ಷಿಯಾಗಿದ್ದೇವೆ. ಮಾರುಕಟ್ಟೆಯಲ್ಲಿ ಅಗತ್ಯ ಅಂತರವನ್ನು ತುಂಬುವ ಉತ್ಪನ್ನಗಳನ್ನು ಗ್ರಾಹಕರಿಗೆ ತರುವುದು ನಮ್ಮ ನಿರಂತರ ಪ್ರಯತ್ನವಾಗಿದೆ. ತಾವಿಯ ನೈಸರ್ಗಿಕ ಪರ್ಸನಲ್ ಕೇರ್ ಶ್ರೇಣಿಯನ್ನು ಪ್ರಾರಂಭಿಸಲು ಮೈಂತ್ರಾ ಜೊತೆ ಪಾಲುದಾರಿಕೆಯನ್ನು ಹೊಂದುವ ಮೂಲಕ ಅಧಿಕೃತ ಸ್ಥಳೀಯ ಉತ್ಪನ್ನಗಳ ಅಂತರ ಮತ್ತು ಬೇಡಿಕೆಯನ್ನು ಪರಿಹರಿಸುವ ನಿಟ್ಟಿನಲ್ಲಿ ನಮಗೆ ಅವಕಾಶ ಸಿಗುತ್ತಿದೆ. ಈ ಉತ್ಪನ್ನಗಳು ತಲೆಮಾರುಗಳ ಮತ್ತು ಹಳೆಯ ಸೂತ್ರೀಕರಣಗಳಿಂದ ಪ್ರೇರೇಪಿತವಾಗಿವೆ. ಆದರೆ, ಆಧುನಿಕ ಜೀವನಶೈಲಿಗೆ ತಕ್ಕಂತೆ ಸಮಕಾಲೀನವಾದ ತಾವಿ ಪರ್ಸನಲ್ ಕೇರ್ ಸಂಗ್ರಹವು ನಿಜವಾದ ಸ್ಥಳೀಯ ಉತ್ಪನ್ನಗಳತ್ತ ಸಾಗಬೇಕೆಂಬ ರಾಷ್ಟ್ರದ ಕರೆಗೆ ಇಂಬು ನೀಡುತ್ತದೆ" ಎಂದು ಅಭಿಪ್ರಾಯಪಟ್ಟರು.

ಮೈಂತ್ರಾ ಫ್ಯಾಷನ್ ಬ್ರ್ಯಾಂಡ್ಸ್ ನ ಹಿರಿಯ ನಿರ್ದೇಶಕರಾದ ನಿಶಾಂತ್ ಪ್ರಸಾದ್ ಅವರು ಮಾತನಾಡಿ, ``ಬ್ರ್ಯಾಂಡ್ ಆಗಿರುವ ತಾವಿಯು ತುಲನಾತ್ಮಕವಾಗಿ ಕಡಿಮೆ ಅವಧಿಯಲ್ಲಿ ಬಹುದೊಡ್ಡ ಹೆಸರು ಮಾಡಿದೆ ಮತ್ತು ನಮ್ಮ ದೇಶದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಮೆಚ್ಚುವ ಮತ್ತು ಗೌರವಿಸುವಂತಹ ವ್ಯಾಪಾರಿಗಳಲ್ಲಿ ಸ್ವತಃ ಒಂದು ಹೆಗ್ಗುರುತನ್ನು ಮೂಡಿಸಿದೆ. ಇದು ಕೇವಲ ಒಂದು ಬ್ರ್ಯಾಂಡ್ ಗಿಂತ ಹೆಚ್ಚಿನದಾಗಿದೆ ಹಾಗೂ ಶತಮಾನಗಳಿಂದ ನಮ್ಮ ದೇಶವನ್ನು ಶ್ರೀಮಂತಗೊಳಿಸುವ ಸಾಂಪ್ರದಾಯಿಕ ಕಲೆ ಮತ್ತು ಕರಕುಶಲ ವಸ್ತುಗಳ ಉನ್ನತಿಗೆ ಮೈಂತ್ರಾದ ಬದ್ಧತೆಯನ್ನು

ಸೂಚಿಸುವಂತಿದೆ. ಸೌಂದರ್ಯ ಮತ್ತು ಪರ್ಸನಲ್ ಕೇರ್ ಜಾಗದಲ್ಲಿ ಮೈಂತ್ರಾ ತನ್ನ ಸ್ಥಾನವನ್ನು ಮತ್ತಷ್ಟು ಬಲಗೊಳಿಸುವಲ್ಲಿ ತಾವಿಯ ನೈಸರ್ಗಿಕ ಪರ್ಸನಲ್ ಕೇರ್ ಉತ್ಪನ್ನಗಳ ಮೂಲಕ ಒಂದು ಮಹತ್ತರ ಹೆಜ್ಜೆ ಇಟ್ಟಿದೆ. ಲಕ್ಷಾಂತರ ಗ್ರಾಹಕರಿಗೆ ಈ ಮೂಲಕ ನಿಜವಾದ ನೈಸರ್ಗಿಕ ಮತ್ತು ಮೇಡ್ ಇನ್ ಇಂಡಿಯಾ ಸೌಂದರ್ಯ ಉತ್ಪನ್ನಗಳನ್ನು ಪೂರೈಸುತ್ತದೆ. ಅಲ್ಲದೇ, ಗ್ರಾಹಕರಿಗೆ ಉತ್ತಮ ಉತ್ಪನ್ನಗಳನ್ನು ನೀಡುವುದಲ್ಲದೇ, ವಿಶ್ವ ದರ್ಜೆಯ ಉತ್ಪನ್ನಗಳನ್ನು ರಚಿಸಲು ಅಗತ್ಯವಾದ ಅಂಶಗಳನ್ನು ಒದಗಿಸುವ ಪರಿಸರ ವ್ಯವಸ್ಥೆಗೆ ಉತ್ತೇಜನವನ್ನೂ ನೀಡುತ್ತದೆ" ಎಂದು ತಿಳಿಸಿದರು.

***View Taavi's latest Skin and Haircare products here:***

***Flipkart:*** *https://www.flipkart.com/taavi-brand-store (App and m-site only).*

***Myntra***: *https://www.myntra.com/taavi-personal-care*

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, and Flipkart Wholesale. Started in 2007, Flipkart has enabled millions of consumers, sellers, merchants, and small businesses to be a part of India's e-commerce revolution, with a registered customer base of over 300 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs have inspired us to innovate on many industry firsts. The recent launch of Flipkart Wholesale, our new digital marketplace, is a testament to our commitment to accelerate the growth of kiranas and MSMEs in India. Flipkart is known for pioneering services such as Cash on Delivery, No Cost EMI and easy returns – customer-centric innovations that have made online shopping more accessible and affordable for millions of Indians. Together with Myntra, and now Flipkart Wholesale, the Flipkart Group will continue to steer the transformation of commerce in India through technology.

**For more information, please contact media@flipkart.com**